# ಭಾಷಾವಿಜ್ಞಾನಿ ಎಸ್.ಎನ್. ಶ್ರೀಧರ್ ಸಂದರ್ಶನ

**ಕೃಷ್ಣಮೂರ್ತಿ ಹನೂರು**

ಚಿತ್ರಗಳು: ಅನೂಪ್ ಆರ್. ತಿಪ್ಪೇಸ್ವಾಮಿ

ಅಮೆರಿಕದ ಸ್ಟೋನಿ ಬ್ರೂಕ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎಸ್.ಎನ್. ಶ್ರೀಧರ್ ಅವರು ಪ್ರಸಿದ್ಧ ಭಾಷಾವಿಜ್ಞಾನಿ. ಅವರ ಕೃತಿಗಳನ್ನು ಕೇಂಬ್ರಿಡ್ಜ್ ಮತ್ತು ಭಾರತದ ಪ್ರತಿಷ್ಠಿತ ಪ್ರಕಾಶನಗಳು ಪ್ರಕಟಿಸಿವೆ. ಕನ್ನಡದಲ್ಲಿಯೂ ಪುಸ್ತಕ ಪ್ರಕಟಿಸಿದ್ದಾರೆ. ಇದೀಗ ಮಧ್ಯಕಾಲೀನ ಕನ್ನಡದ ಸುಪ್ರಸಿದ್ಧ ಕವಿ ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾ ಮಂಜರಿ'ಯ ಸುಮಾರು 2,500 ಷಟ್ಪದಿಗಳು ಶ್ರೀಧರ್ ಅವರು ಸೇರಿದಂತೆ ಐದು ಜನ ಕನ್ನಡ ವಿದ್ವಾಂಸರಿಂದ ಇಂಗ್ಲಿಷ್‌ಗೆ ಭಾಷಾಂತರಗೊಂಡಿವೆ. ಈ ಕೃತಿಯ ಸಂಪಾದಕರಾಗಿ ಕುಮಾರವ್ಯಾಸನ ಇಂಗ್ಲಿಷ್ ಭಾಷಾಂತರದ ಪರಿಶೀಲನೆ ಮತ್ತು ಓದಿನ ನಡುವೆ ಶ್ರೀಧರ್ ಅವರು ಮಾತನಾಡಿದ್ದು ಇಲ್ಲಿದೆ.

